ದಿನಾಂಕ 06.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ-ಶ್ರೀ ಸಿ.ಕೆ.ಪಿ ವಕೀಲರಿಂದಃ-</u>**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ಮುಕ್ಕಟೇರ ಪೆಮ್ಮಯ್ಯ ನನಗೆ ಗೊತ್ತು. ಅವರು ವಾದಿಯ ಅಜ್ಜ. 5ನೇ ಪ್ರತಿವಾದಿ ನನ್ನ ಮಾವ. ಅವರ ತಂದೆಯ ಹೆಸರು ಸುಬ್ಬಯ್ಯ. ಸುಬ್ಬಯ್ಯ ಮತ್ತು ಪೆಮ್ಮಯ್ಯ ಒಂದೇ ಕುಟುಂಬದವರು. ಪೆಮ್ಮಯ್ಯನಿಗೆ ಬೆಳ್ಳಿಯಪ್ಪ ಎಂಬ ಒಬ್ಬನೇ ಮಗ. ಸುಬ್ಬಯ್ಯನಿಗೆ ಕರುಂಬಯ್ಯ ಮತ್ತು ಮೇದಪ್ಪ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳು ಇದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಕರುಂಬಯ್ಯರವರಿಗೆ ಮೋಹನ್ ಅಚ್ಚಯ್ಯ ಮತ್ತು ಸುಬ್ರಹ್ಮಣಿ ಎಂಬ ಇಬ್ಬರು ಗಂಡು ಮಕ್ಕಳು ಹಾಗೂ ಮೂರು ಜನ ಹೆಣ್ಣು ಮಕ್ಕಳು. ಮೋಹನ್ ಅಚ್ಚಯ್ಯ ಮತ್ತು ಸುಬ್ರಹ್ಮಣಿ ಮೃತರಾಗಿದ್ದು, ಅವರ ಸಹೋದರಿಯರು ಜೀವಂತವಾಗಿ ಇದ್ದಾರೆ. ಮೋಹನ್ ಅಚ್ಚಯ್ಯ ಮತ್ತು ಸುಬ್ರಹ್ಮಣಿ ರವರ ವಾರಸುದಾರರು ಇದ್ದಾರೆ. ಕರುಂಬಯ್ಯ ಮತ್ತು ಮೇದಪ್ಪರವರಿಗೆ ನಾಲ್ಕೇರಿ ಗ್ರಾಮದ ಬಣ್ಣಮೊಟ್ಟೆ ಗ್ರಾಮದಲ್ಲಿ ಆಸ್ತಿಗಳು ಇದ್ದವು. ಸದರಿ ಸ್ವತ್ತುಗಳನ್ನು ಕರುಂಬಯ್ಯ ರವರು ಮಾರಾಟ ಮಾಡಿರುತ್ತಾರೆ. ಕರುಂಬಯ್ಯರವರಿಗೆ ಯಾವ ರೀತಿ ಆ ಆಸ್ತಿಗಳು ಹೋಗಿದ್ದವು ಎಂಬುದು ನನಗೆ ಗೊತ್ತಿಲ್ಲ. ಮೇದಪ್ಪರವರಿಗೆ ಆ ಆಸ್ತಿಗಳಲ್ಲಿ ಹಕ್ಕು ಇತ್ತು ಎಂದರೆ ಸರಿ. ಬಣ್ಣಮೊಟ್ಟೆ ಗ್ರಾಮದಲ್ಲಿ ಮುಕ್ಕಾಟೇರ ಕಾರ್ಯಪ್ಪ, ಚಿನ್ನಪ್ಪ ಮತ್ತು ಮ್ಮಕಳು

ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಬಣ್ಣಮೊಟ್ಟೆ ಗ್ರಾಮದ ಆಸ್ತಿ ಕರುಂಬಯ್ಯ, ಮೇದಪ್ಪ, ಕಾರ್ಯಪ್ಪ ಮತ್ತು ಚಿನ್ನಪ್ಪರವರ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ಬಾಣೆ ಮತ್ತು ಗದ್ದೆ ಜಾಗ ಇತ್ತು ಎಂದರೆ ಸರಿ. ವಾದಿ ಮತ್ತು ಪ್ರತಿವಾದಿ 1 ರಿಂದ 4 ರವರು ಸರ್ವೆ ನಂ. 148/1 ರಲ್ಲಿ ಪ್ರತ್ಯೇಕವಾಗಿ ಸಾವಧೀನದಲ್ಲಿ ಇದ್ದಾರೆ. ಸದರಿ ಅವರು ಆಸ್ತಿಗಳನ್ನು ಭಾಗ ಮಾಡಿಕೊಂಡು, ತಮ್ಮ ಭಾಗಕ್ಕೆ ಬಂದ ಸ್ವತ್ತುಗಳಿಗೆ ಕಂದಾಯವನ್ನು ಪಾವತಿ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಮೇದಪ್ಪನವರ ವಾರಸುದಾರರು 13 ಎಕರೆ ಬಾಣೆ ಮತ್ತು 10 ಎಕರೆ ಗದ್ದೆ ಜಾಗದಲ್ಲಿ 1992 ಕ್ಕಿಂತ ಹಿಂದಿನಿಂದಲೂ ಸ್ವಾಧೀನದಲ್ಲಿ ಇದ್ದಾರೆ. 10 ನೇ ಪ್ರತಿವಾದಿ ನನಗೆ ಪರಿಚಯವಿದ್ದು, ಅವರ ಮನೆ ನಮ್ಮ ಮನೆಯಿಂದ 2 ಕಿ.ಮೀ ಅಂತರದಲ್ಲಿ ಇದೆ. ದಿನಾಂಕ 26.10.2013 ರಂದು 5 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಬಿ ಅನುಸೂಚಿ ಸ್ವತ್ತನ್ನು 10 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಪ್ರತಿಪಲದ ಹಣವನ್ನು ಅವರು ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತು ಈಗ 10 ನೇ ಪ್ರತಿವಾದಿಯ ಸ್ವಾಧೀನ ಇದೆ ಎಂದರ ಸರಿ. ವಾದಿಯು ನನಗೆ ಪರಿಚಯವಿರುತ್ತಾರೆ. ನಾನು ವಾದಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

ಓಎಸ್. **91/2021**

ಪಿಡಬ್ಲ್ಯೂ-2

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.